ಮಾರನೇ ದಿನ ನೋಡಿದ್ರೆ ಸೇಡು ತೀರಿಸಿಕೊಳ್ಳುವ ಹಾಗೆ ಹಸಿ ಮೆಣಸಿನಕಾಯಿ, ಅಥವಾ ಈರುಳ್ಳಿ ಅಥವಾ ಒಣ ಮೆಣಸಿನಕಾಯಿ ಯಾವುದರದ್ದೋ ಒಂದು ಹದವಾದ ಚಟ್ನಿ ಮಾಡಿ ಒಂದು ಡಬ್ಬಿ ತುಂಬಿಸಿ ಇಡುವುದು. ಮತ್ತೆಮತ್ತೆ ಅಡುಗೆಮನೆಯ ಮೇಲಿನ ಪ್ರಭುತ್ವ ಪ್ರಶ್ನೆ ಆಗುವುದಾದರೆ ನಾಲಿಗೆ ರುಚಿ ಸರಿಮಾಡಿಕೊಳ್ಳಲು ವ್ಯವಸ್ಥೆ ಇರಬೇಕಲ್ಲ?

ನಾನು ಎಷ್ಟೋ ವರ್ಷಗಳ ಕಾಲ ನನ್ನ ಅಮ್ಮ ಮಾತ್ರ ಹೀಗೆ ಅಡುಗೆಮನೆಯಲ್ಲಿ ಆಗಾಗ ಮುನಿಸಿನಿಂದಲೇ ಕಾರ್ಯ ನಿರ್ವಹಣೆ ಮಾಡುತ್ತಾರೆ ಎಂದುಕೊಂಡಿದ್ದೆ. ಆದರೆ, ಇದು ಮನೆಮನೆ ಕಥೆ ಅಂತ ಗೊತ್ತಾಗಲಿಕ್ಕೆ ಹೆಚ್ಚು ಸಮಯ ಬೇಕಾಗಲಿಲ್ಲ.

ಮೊನ್ನೆ ನಾವು ಶಾಲಾ ಸ್ನೇಹಿತೆಯರು ಭೇಟಿ ಆಗಿದ್ವಿ. ಎಲ್ಲರೂ ಸಂಪ್ರದಾಯಾನುಸಾರ ಹಳೆ ಗೆಳತಿಯರು, ಗೆಳೆಯರು, ಸ್ಕೂಲಿನ ಶಿಕ್ಷೆ, ಗಂಡ–ಮಕ್ಕಳು ಅವರ ಸಂಬಂಧಿಗಳು ಎಲ್ಲರ 'ಯೋಗ ಕ್ಷೇಮ' ವಿಚಾರಿಸಿಕೊಂಡಾದ ಮೇಲೆ ನಮ್ ನಮ್ಮ ತಾಯಂದಿರು ವಯಸ್ಸಾಗುತ್ತಾ ಹೇಗೆ ತಾವು ಬಹುತೇಕ ಉರಿದು ಬೀಳುತ್ತಿದ್ದ ಅಡುಗೆಮನೆಯಲ್ಲಿ ಸಮಾಧಾನ ಹೊಂದುತ್ತಾ ಇದ್ದಾರೆ ಅಂತ ಚರ್ಚೆ ಆಯಿತು.

ಅದಕ್ಕೇ ನಾವು ಕೆಲವರು ಅಮ್ಮಂದಿರ ದೇಸಿ ಅಡುಗೆಯ ಮಾರ್ಗವನ್ನು ಧಿಕ್ಕರಿಸಿ ಬೇರೆ ಯಾವುದೋ ಅಡುಗೆಗಳನ್ನು ಕಲಿತು ಬಿಟ್ಟೆವು. ಕನಿಷ್ಠ ಅದರಲ್ಲಿ ಇವರ 'ಸಂಪ್ರದಾಯ' ತಲೆ ಹಾಕುವಂತೆಯೇ ಇಲ್ಲ ಎನ್ನುವ ಕಾರಣಕ್ಕೆ!

"ಏನಾರಾ ಹೇಳವ. ಅತ್ತೆಯರ ಹತ್ರ ಸ್ವಲ್ಪಾರಾ ಹೇಳ್ಕ್ಯಬೋದು... ಯಾರ್ನಾರಾ ಬೈಬೋದು, ಅವ್ರು ಅರ್ತ ಮಾಡ್ಕ್ಯಂತರೆ... ಈ ಅವ್ವಂದ್ರಿಗೆ ನಮ್ಮುನ್ ನೋಡಿದ್ ತಕ್ಷಣ ಏನರ ಕೆಲಸ ನೆನಪಿಗೆ ಬರ್ತವು. ಅಡಿಗೆಮನೆ ಸೇರಿಕ್ಯಂದ್ರೆ ಹೊರಗ ಬರದೇ ಇಲ್ಲ. ಮತ್ತ ನಮ್ಮುನ್ನ ಇಲ್ಲೇ ಸಾಯಾಕ್ ಬಿಟ್ರು ಅಂತ ಬೈತರೆ. ಬಾರಮ ನಾವು ಅಡಿಗಿ ಮಾಡ್ತವಿ ಅಂದರ ನೀನು ಮಾಡಿದ್ದ ತುತ್ತು ಬಾಯಾಗ ಇಡಂಗೆ ಇರಲ್ಲ ಬಿಡು ಅಂತರೆ... ಮಾಡಿಕ್ಯ ಅತ್ಲಗೆ ಅಂತ ಬಿಟ್ರೆ ನಮಿಗೆ ಈ ವಯಸ್ಸಿನ್ಯಗೂ ಯಾರೂ ಕುಂದ್ರಿಸಿ ಒಂದು ತುತ್ತು ಅನ್ನ ಹಾಕಂಗಿಲ್ಲ ಅಂತರೆ... ಥು ಥು... ಬ್ಯಾಡವಾ" ಅಂದಳು ಸ್ನೇಹಿತೆ.

ಇನ್ನುಳಿದವರಿಗೆ ಇದು ನಮ್ಮದೇ ಕಥೆ ಅನ್ನಿಸಿಬಿಟ್ಟಿತು. ಬರುಬರುತ್ತಾ ಅಡುಗೆಮನೆ ಡ್ರಗ್ಸ್ ರೀತಿಯಲ್ಲಿ ಅಡಿಕ್ಷನ್ ಆಗಿಬಿಡುತ್ತದೋ ಅಥವಾ ಅಮ್ಮಂದಿರೇ ಅಲ್ಲಿ ಉದ್ದೇಶಪೂರ್ವಕವಾಗಿ ಕಳೆದುಹೋಗಲು ಬಯಸುತ್ತಾರೋ ತಿಳಿಯದು. ಅಲ್ಲಿ ಒಳಗೆ ಸೇರಿಕೊಂಡು ಜಗತ್ತಿಗೆ ವಿಮುಖರಾಗಿ ಬೆಂಕಿಯಲ್ಲಿ ಹುರಿಯುತ್ತಾ, ಕುಟ್ಟುತ್ತಾ, ಕಲಸುತ್ತಾ, ಮಾಡಿ ಬಡಿಸುತ್ತಾ... ಸಂಜೆ ಸೀರಿಯಲ್ ಹೊತ್ತಿಗೆ ಮಾತ್ರ ಹೊರಗೆ ಬರುತ್ತಾ...

ಅಮ್ಮಂದಿರು ಕಳೆದು ಹೋಗುವ ಅಡುಗೆಮನೆಯಲ್ಲಿ ನಾವಿಷ್ಟು ಜಾಗ ಮಾಡಿಕೊಂಡಿದ್ದೇವೆ. ಅಲ್ಲೇ ಲ್ಯಾಪ್‌ಟಾಪ್ ಅಥವಾ ಮೊಬೈಲ್ ಫೋನ್ ಇಟ್ಟುಕೊಂಡು, ಬೇಯುವ, ಲಟ್ಟಿಸುವ, ಕುಟ್ಟುವ, ಕರಿಯುವ ನಡುವೆ ಅಷ್ಟಿಷ್ಟು ವೃತ್ತಿ ಸಂಬಂಧಿತ ಕೆಲಸ ಪೂರೈಸುತ್ತಾ, ಆಗಾಗ ಹೊರಗಿನಿಂದ ಆರ್ಡರ್ ಮಾಡುವಾಗಲೂ ಅಥವಾ ಊಟಕ್ಕೆ ಹೋಟೆಲಿಗೆ ಹೋದಾಗಲೂ ಮನೆ ಊಟದಂಥಾ ರುಚಿಯನ್ನು ಹೋಟೆಲಿನಲ್ಲೂ ಹೋಟೆಲಿನಂಥಾ ರುಚಿಯನ್ನು ಮನೆಯಲ್ಲೂ ಸಾಕ್ಷಾತ್ಕರಿಸಲು ಪ್ರಯತ್ನ ಪಡುತ್ತಾ ಲಿಂಗ ಸಮಾನತೆಯ ಕನಸನ್ನು ಆಫೀಸಿನಲ್ಲಿ ಮಾತ್ರ ಗಟ್ಟಿಗೊಳಿಸುತ್ತಾ ಅಡುಗೆಮನೆಯಿಂದ ಅನತಿ ದೂರದಲ್ಲೇ ಇಟ್ಟು ನಡೆಯುತ್ತಿದ್ದೇವೆ.

ಇದಕ್ಕೆ ಹೊಂದುವ ಹಾಗೆ ಪರಿಚಿತರೊಬ್ಬರು ತಮ್ಮ ಸೊಸೆಯ ಬಗ್ಗೆ ದೂರು ಹೇಳುತ್ತಿದ್ದರು. "ಅವಳಿಗೆ ಅಡುಗೆ ಅಂದರೆ ಏನೂ ಗೊತ್ತಿಲ್ಲ ಕಣ್ರೇ... ಅವರ ಅಮ್ಮನ್ನ ಕೇಳಿದೆ, ಏನೂ ಕಲಿಸಿಲ್ಲವಾ ಅವಳಿಗೆ ಅಂತ. ಅವಳು ಎಂಜಿನಿಯರಿಂಗ್ ಕಲಿಯುತ್ತಾ ಇದ್ದಳು, ಅದಕ್ಕೆ ಅಡುಗೆಮನೆ ಒಳಗೆ